

## ಸರಣಿಯ ಆಸಕ್ತಿಕರ ಅಂಕಿಅಂಶ


- **7187** ರನ್ಸ್ (ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲೇ ದಾಖಲಾದ ಎರಡನೇ ಅತಿ ಹೆಚ್ಚು ಗರಿಷ್ಠ ಮೊತ್ತ, ಐದು ಟೆಸ್ಟ್‌ಗಳ ಸರಣಿಯಲ್ಲಿ ಇದೇ ಇದುವರೆಗೆ ದಾಖಲಾದ ಅತಿ ಹೆಚ್ಚು ಮೊತ್ತ).
- **3807** (ಐದು ಟೆಸ್ಟ್‌ಗಳಲ್ಲಿ ಭಾರತ ಜಮೆ ಮಾಡಿದ ಒಟ್ಟು ಸ್ಕೋರ್... ಟೆಸ್ಟ್ ಸರಣಿಯೊಂದರಲ್ಲಿ ತಂಡವೊಂದು ದಾಖಲಿಸಿದ ಎರಡನೇ ಅತಿ ಹೆಚ್ಚು ಮೊತ್ತ ಇದು).
- **21** ಶತಕಗಳು (ಸರಣಿಯಲ್ಲಿ ಭಾರತ, ಇಂಗ್ಲೆಂಡ್ ಎರಡೂ ತಂಡಗಳು ದಾಖಲಿಸಿದ ಒಟ್ಟು ಶತಕಗಳು.
- **30** ರನ್‌ಗಿಂತ ಕಡಿಮೆ (ಐದರಲ್ಲಿ ಮೂರು ಟೆಸ್ಟ್‌ಗಳ ಮೊದಲ ಇನಿಂಗ್ಸ್ ಸ್ಕೋರ್‌ನಲ್ಲಿನ ಅಂತರ. ಇದುವರೆಗೆ ನಾಲ್ಕು ಟೆಸ್ಟ್ ಸರಣಿಗಳಲ್ಲಿ ಮಾತ್ರ ಈ ರೀತಿ ಆಗಿದೆ).
- **45** ವಿಕೆಟ್ (ಬೋಲ್ಡ್ ಮಾಡಿ ಸರಣಿಯೊಂದರಲ್ಲಿ ಔಟ್ ಮಾಡಿದ್ದು... 1984ರ ನಂತರ ಟೆಸ್ಟ್ ಸರಣಿಯಲ್ಲಿ ಇಷ್ಟು ಬ್ಯಾಟ್ಸ್‌ಮನ್‌ಗಳು ಬೌಲ್ಡ್ ಆದದ್ದು ಈ ಸರಣಿಯಲ್ಲಿ ಮಾತ್ರ).

ಐಪಿಎಲ್‌ನಲ್ಲಿ ಚೆಂಡನ್ನು ನೆಲಕ್ಕೆ ಹೊಡೆದೇ ಹೇಗೆ ಎದುರಾಳಿಯನ್ನು ಕಾಡಬಹುದು ಎಂದು ತೋರಿಸಿಕೊಟ್ಟಿದ್ದವರು. ಹೆಚ್ಚು ಸ್ವಿಂಗ್ ಆಗುವ ನೆಲದಲ್ಲಿ ಅವರು ಅವುಡುಗಚ್ಚಿ ಆಡಿದ ಬಗೆಯಲ್ಲಿ ಅರಿವಿನ ಅಧ್ಯಾಯವೊಂದು ಇದೆ. ಓವಲ್‌ನಲ್ಲಿ ನಡೆದ ಕೊನೆಯ ಟೆಸ್ಟ್‌ನ ಮೊದಲ ಇನಿಂಗ್ಸ್‌ನಲ್ಲಿನ ಅವರ ಅರ್ಧ ಶತಕ ಭಾರತಕ್ಕೆ ಅತ್ಯಗತ್ಯ ಇದ್ದ ಆತ್ಮವಿಶ್ವಾಸ ತಂದುಕೊಟ್ಟಿದ್ದನ್ನು ಶುಭಮನ್ ಗಿಲ್ ಸ್ಮರಿಸಿಕೊಂಡಿದ್ದು ವಿಶೇಷ. ಬುಮ್ರಾ ಆಡಿದ್ದು ಮೂರು ಟೆಸ್ಟ್‌ಗಳಲ್ಲಿ ಮಾತ್ರ. ಅದರಲ್ಲಿ ಒಂದನ್ನು ಡ್ರಾ ಮಾಡಿಕೊಂಡಿದ್ದರಲ್ಲಿ ಅವರ ಪಾತ್ರ ಮುಖ್ಯವಿತ್ತು. ಕೇವಲ 22 ರನ್ ಅಂತರದಿಂದ ಮೂರನೇ ಟೆಸ್ಟ್ ಸೋತಾಗ ಬಾಡಿದ ಮುಖಗಳಲ್ಲಿ ಅವರದ್ದೂ ಒಂದು. ಯಾಕೆಂದರೆ ಅವರು ಜಡೇಜಾ ಜೊತೆಯಲ್ಲಿ ಬಾಲಂಗೋಚಿಯಂತೆ ಅಲ್ಪಾವಧಿ ಆಡದೇ ಐವತ್ತನಾಲ್ಕು ಎಸೆತಗಳನ್ನು ಎದುರಿಸಿದ್ದರು. ಅದೇ ಪಂದ್ಯದಲ್ಲಿ ಮೊಹಮ್ಮದ್ ಸಿರಾಜ್ ಕೊನೆಯಲ್ಲಿ ಆಕಸ್ಮಿಕವಾಗಿ ಬೌಲ್ಡ್ ಆಗಿ, ಕುಸಿದು ಮಂಡಿಯೂರಿದ್ದು.

ಶುಭಮನ್ ಗಿಲ್ ನಾಯಕನಾಗಿ ಯುವಕರ ತಂಡ ಮುನ್ನಡೆಸಿದ್ದೇ ಅಲ್ಲದೆ, ಎಲ್ಲರಿಗಿಂತ ಅತಿ ಹೆಚ್ಚು ರನ್ ಜಮೆ ಮಾಡಿದರು (754). ಅತಿ ಹೆಚ್ಚು ರನ್ ಗಳಿಸಿದವರ ಪಟ್ಟಿಯ ಅಗ್ರ ಆರು ಮಂದಿಯಲ್ಲಿ ನಾಲ್ವರು ಭಾರತದವರು ಎನ್ನುವುದು ಹೆಮ್ಮೆ. ಕೆ.ಎಲ್. ರಾಹುಲ್, ರವೀಂದ್ರ ಜಡೇಜಾ ಹಾಗೂ ರಿಷಭ್ ಪಂತ್ ಉಳಿದ ಮೂವರು. ಅತಿ ಹೆಚ್ಚು ವಿಕೆಟ್ (23) ಪಡೆದದ್ದು ಮೊಹಮ್ಮದ್ ಸಿರಾಜ್. ಬೂಮ್ರಾ ಹಾಗೂ ಪ್ರಸಿದ್ಧ ಕೃಷ್ಣ ತಲಾ 14 ವಿಕೆಟ್ ತಮ್ಮದಾಗಿಸಿಕೊಂಡು ಅತಿ ಹೆಚ್ಚು ವಿಕೆಟ್ ಪಡೆದವರ ಪಟ್ಟಿಯ ಮೊದಲ ಐವರಲ್ಲಿ ಸೇರಿಕೊಂಡರು. ಬೂಮ್ರಾ ಆಡದ ಎರಡು ಪಂದ್ಯಗಳಲ್ಲಿ ಭಾರತ ಗೆದ್ದಿದ್ದು ತಂಡದ ಆತ್ಮಬಲಕ್ಕೆ ಹಾಗೂ ಸಿರಾಜ್ ಹೊಣೆಗಾರಿಕೆಗೆ ಸಾಕ್ಷಿ. ಪಾದದ ಮೂಳೆ ಮುರಿದಿದ್ದರೂ ರಿಷಭ್ ಆಡಿ ಹೃದಯ ಗೆದ್ದರು. ಭುಜದ ಮೂಳೆ ಮುರಿದ ಸ್ಥಿತಿಯಲ್ಲೇ ಇಂಗ್ಲೆಂಡ್ ತಂಡಕ್ಕೆ ಗೆಲುವು ಬಯಸಿ ಆಡಲು ಬಂದ ಕ್ರಿಸ್ ವೋಕ್ಸ್ ಹೃದಯ ಕಲಕಿದರು.

2005ರಲ್ಲಿ ನಡೆದಿದ್ದ ashes ಸರಣಿಯ ಎಜ್ಬಾಸ್ಟನ್ ಟೆಸ್ಟ್‌ನಲ್ಲಿ ಇಂಗ್ಲೆಂಡ್ ಕೇವಲ ಎರಡು ರನ್‌ಗಳಿಂದ ಗೆದ್ದು ದೀರ್ಘಾವಧಿ ಕ್ರಿಕೆಟ್ ಕಡೆಗೆ ಜನರು ನೋಡುವಂತೆ ಮಾಡಿತ್ತು. ಈಗ ಹೈ ವೋಲ್ಟೇಜ್ ಸರಣಿಯ ಮೂಲಕ ಭಾರತ, ಇಂಗ್ಲೆಂಡ್ ಎರಡೂ ತಂಡಗಳು ಟೆಸ್ಟ್ ಕ್ರಿಕೆಟ್‌ಗೆ ವೀಕ್ಷಕರು ಇದ್ದಾರೆ ಎನ್ನುವುದನ್ನು ಸಾಬೀತುಪಡಿಸಿದ್ದಾರೆ. ■


ಸಂಧಿಲಿನ್
SANDHILIN सन्धिलिन



ಸಂಧಿಲಿನ್ ಹಚ್ಚಿ
ನೋವಿಗೆ
ವಿದಾಯ ಹೇಳಿ!




- ವಿವಿಧ ತರಹದ ನೋವಿಗೆ ಶೀಘ್ರ ಪರಿಣಾಮಕಾರಿ
- 'ಸಂಧಿಲಿನ್' ಲಿನಿಮೆಂಟ್‌ನ್ನು ಆಯುರ್ವೇದದ ಋಷಿಮುನಿ ಪ್ರಣೀತ ಶಾಸ್ತ್ರೋಕ್ತವಾಗಿ, ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿ ತಯಾರಿಸಲಾಗಿದೆ.
- ಚರ್ಮ ಅಥವಾ ಬಟ್ಟೆಯ ಮೇಲೆ ಯಾವುದೇ ಜಿಡ್ಡು, ಕಲೆಗಳು ಉಂಟಾಗುವುದಿಲ್ಲ.

ತಯಾರಕರು

SDM™ AYURVEDA PHARMACY

ಶ್ರೀ ಧರ್ಮಸ್ಥಳ
ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಉಡುಪಿ–574 118, ಕರ್ನಾಟಕ.
Customer Care: +91 89709 77513
Email: sdmaph@sdmayurvedacollegeudupi.in
https://sdmayupharmacy.com
ISO 9001:22000 & GMP CERTIFIED
U.I.N:KA/044/2021